## ನಿಮ್ಮೊಡನೆ

# ಭರವಸೆಯ ಬೆಳ್ಳಿಗೆರೆ ಮುಸುಕಾಗಿಸುವ ಅಂಕಿಅಂಶ

ಲಿಂಗಸಮಾನತೆ ಮತ್ತು ಲಿಂಗಾನುಪಾತದಂತಹ ವಿಷಯಗಳಲ್ಲಿ ಭಾರತೀಯ ಸಮಾಜಕ್ಕೆ ಅಂತಹ ಒಳ್ಳೆಯ ಹೆಸರೇನೂ ಇಲ್ಲ. ಆದರೂ ಈ ದಿಸೆಯಲ್ಲಿ ಸುಧಾರಣೆ ಆಗುತ್ತಿದೆ ಎಂಬ ಆಶಾಭಾವ ನೆಲೆಗೊಂಡಿರುವುದು ಸುಳ್ಳಲ್ಲ. ಮೇಲ್ನೋಟಕ್ಕೆ ಅದರಲ್ಲಿ ಸತ್ಯಾಂಶವಿದೆ ಎಂದು ಅನ್ನಿಸಿದರೂ ಬೇರೆ ಬೇರೆ ಬಗೆಯ ಸಮೀಕ್ಷೆಗಳು ಅಂತಹ ಭರವಸೆಯ ಬೆಳ್ಳಿಗೆರೆಗಳನ್ನು ಅಳಿಸಿಹಾಕುತ್ತಿವೆ.

ಗಂಡುಮಕ್ಕಳ ಪಕ್ಷಪಾತಿ ಸಮಾಜ ನಮ್ಮದು ಎಂದು ಹೇಳುವುದಕ್ಕೆ ಅಧ್ಯಯನಗಳ ಆಧಾರವೇನೂ ಬೇಕಾಗಿಲ್ಲ. ದಿನನಿತ್ಯ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಅನುಭವಕ್ಕೆ ಬರುವ ಸಂಗತಿ ಅದು. ಈ ತಾರತಮ್ಯವನ್ನು ಜೀವಂತವಾಗಿ ಇರಿಸಲು ನಮ್ಮ ಸಾಂಸ್ಕೃತಿಕ ರಾಜಕೀಯವು ಶ್ರಮಿಸುತ್ತಲೇ ಇದೆ. ಮಹಿಳೆಯರು ಏನು ತೊಡಬೇಕು, ಯಾವ ಕೆಲಸ ಮಾಡಬೇಕು, ಯಾರನ್ನು ಮದುವೆಯಾಗಬೇಕು ಎಂಬಿತ್ಯಾದಿ ವಿಷಯಗಳನ್ನು ಅದು ಪ್ರಭಾವಿಸುತ್ತಲೇ ಇದೆ. ಇವುಗಳ ನೆಲೆಯಲ್ಲಿ ಏಣಿಶ್ರೇಣಿಗಳು ರೂಪುಗೊಂಡಿವೆ ಮತ್ತು ಪೋಷಣೆ ಪಡೆಯುತ್ತಿವೆ.

ಹೆಣ್ಣು ಮಕ್ಕಳ ಪ್ರಮಾಣ ಕೆಲವು ರಾಜ್ಯಗಳಲ್ಲಿ ಗಣನೀಯವಾಗಿ ಕುಸಿಯುತ್ತಿರುವ ಸಂಗತಿ ಬೇರೆ ಬೇರೆ ಬಗೆಯ ಸಮೀಕ್ಷೆಗಳಿಂದ ಕಾಲಕಾಲಕ್ಕೆ ಹೊರಬರುತ್ತಲೇ ಇದೆ. ಪಂಜಾಬ್, ಹರಿಯಾಣದಂತಹ ರಾಜ್ಯಗಳಿಗೆ ಸೀಮಿತವಾಗಿದ್ದ ಈ ವಿದ್ಯಮಾನವು ದಕ್ಷಿಣ ಭಾರತದಲ್ಲೂ ಕಾಣಿಸಿಕೊಂಡಿದೆ. ನಾಗರಿಕ ನೋಂದಣಿ ವ್ಯವಸ್ಥೆಯಲ್ಲಿನ 2007ರಿಂದ 2016ರವರೆಗಿನ ಮಾಹಿತಿಯನ್ನು ಆಧರಿಸಿ ಭಾರತದ ರಿಜಿಸ್ಟ್ರಾರ್ ಜನರಲ್ ಸಿದ್ಧಪಡಿಸಿರುವ ಅಂಕಿಅಂಶಗಳೇ ಈ ಕಳವಳಕಾರಿ ಅಂಶವನ್ನು ದೃಢಪಡಿಸಿವೆ.

ಲಿಂಗತಾರತಮ್ಯ ನಿವಾರಣೆ ನೆಲೆಯ ಜಾಗತಿಕ ಸೂಚ್ಯಂಕದಲ್ಲೂ ಭಾರತದ ಸ್ಥಾನ ಮತ್ತಷ್ಟು ಕುಸಿತ ಕಂಡಿದೆ. 'ವರ್ಲ್ಡ್ ಎಕನಾಮಿಕ್ ಫೋರಮ್‌ನ ಗ್ಲೋಬಲ್ ಜೆಂಡರ್ ಗ್ಯಾಪ್ ರಿಪೋರ್ಟ್– 2021' ಈಗ ಬಿಡುಗಡೆ ಆಗಿದೆ. ಜಗತ್ತಿನ 156 ರಾಷ್ಟ್ರಗಳ ರ‍್ಯಾಂಕ್ ಪಟ್ಟಿಯಲ್ಲಿ ಭಾರತದ ಸ್ಥಾನ 140ಕ್ಕೆ ಇಳಿದಿದೆ. ಅಂದರೆ 28 ಸ್ಥಾನ ಕುಸಿದಿದೆ. ದಕ್ಷಿಣ ಏಷ್ಯಾದಲ್ಲಿ ಅತ್ಯಂತ ಕಳಪೆ ಸಾಧನೆ ತೋರಿದ ಮೂರು ದೇಶಗಳಲ್ಲಿ ಭಾರತ ಕೂಡ ಒಂದು. ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನಕ್ಕಿಂತ ಮೇಲಿದ್ದೇವೆ ಎಂಬುದಷ್ಟೇ ಸಮಾಧಾನದ ಸಂಗತಿ.

ಈ ಸೂಚ್ಯಂಕವು ಮಹಿಳೆಯರ ಆರ್ಥಿಕ ಸಹಭಾಗಿತ್ವ ಮತ್ತು ಅವಕಾಶ, ಶೈಕ್ಷಣಿಕ ಸಾಧನೆ, ಮಹಿಳೆಯರ ಆರೋಗ್ಯ ಮತ್ತು ಬದುಕುಳಿಯುವಿಕೆ ಹಾಗೂ ರಾಜಕೀಯ ಸಬಲೀಕರಣ ಈ ನಾಲ್ಕು ಮಾನದಂಡಗಳನ್ನು ಆಧಾರವಾಗಿ ಇರಿಸಿಕೊಂಡು ರೂಪುಗೊಂಡಿದೆ. ಈ ನಾಲ್ಕೂ ನೆಲೆಗಳಲ್ಲಿ ಮಹಿಳೆಯರಿಗೆ ತೊಡರುಗಳು ಇರುವುದು ಗೊತ್ತಿರುವಂತಹ ಸಂಗತಿಯೇ ಆಗಿದೆ. ಕೋವಿಡ್–19 ಸಾಂಕ್ರಾಮಿಕವು ಅದನ್ನು ಮತ್ತಷ್ಟು ಹೆಚ್ಚಿಸಿದೆ, ಅವಕಾಶಗಳನ್ನು ಮೊಟಕುಗೊಳಿಸಿದೆ.


ಮೀಸಲಾತಿಯ ಕಾರಣದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶದ ಬಾಗಿಲು ತೆರೆದುಕೊಂಡಿದೆಯಾದರೂ ರಾಜ್ಯಗಳ ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯ ತೀರಾ ಕಡಿಮೆ. ಸಚಿವ ಸಂಪುಟದಲ್ಲಿ ತೋರಿಕೆಗೆ ಎಂಬಂತೆ ಒಂದಿಬ್ಬರಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಉದ್ದೇಶಕ್ಕೆ ರಾಜಕೀಯ ಪಕ್ಷಗಳಲ್ಲಿ ಇನ್ನೂ ಸಹಮತ ಮೂಡದಿರುವುದು ಆ ಪಕ್ಷಗಳ ಪುರುಷಪಕ್ಷಪಾತಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ನೆವಗಳನ್ನು ಮುಂದಿಟ್ಟು ಚುನಾವಣೆಗಳಲ್ಲಿ ಮಹಿಳೆಯರ ಸ್ಪರ್ಧೆಗೆ ಅವಕಾಶ ನಿರಾಕರಿಸಲಾಗುತ್ತಿದೆ.

ಆರ್ಥಿಕ ಸಹಭಾಗಿತ್ವದ ವಿಚಾರದಲ್ಲೂ ಮಹಿಳೆಗೆ ಹಿನ್ನಡೆ ಉಂಟುಮಾಡಿರುವುದು ಇದೇ ನಕಾರಾತ್ಮಕ ಧೋರಣೆ. ವೇತನ ತಾರತಮ್ಯ ನಿವಾರಣೆ ಇನ್ನೂ ಕನಸಾಗಿಯೇ ಉಳಿದಿದೆ. ಈ ಸಾಂಕ್ರಾಮಿಕದ ಸಂದರ್ಭದಲ್ಲಿ ಉದ್ಯೋಗ ಕಳೆದುಕೊಂಡವರಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆಯೇ ಹಲವು ಪಟ್ಟು ಹೆಚ್ಚು ಎಂದು ಸಮೀಕ್ಷೆಗಳು ಹೇಳಿವೆ. ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಈಗಲೂ ಕಡಿಮೆ. ಕೇಂದ್ರ ಸರ್ಕಾರ 'ಬೇಟಿ ಬಚಾವೊ ಬೇಟಿ ಪಢಾವೊ'ದಂಥ ಜನಪ್ರಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹೆಣ್ಣುಮಕ್ಕಳಿಗೆ ಉತ್ತೇಜನ ನೀಡುವಂತಹ ಹಲವು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರಗಳು ಕೂಡ ಹಮ್ಮಿಕೊಂಡಿವೆ. ಆದರೆ, ಇವೆಲ್ಲ ಕಾರ್ಯಕ್ರಮಗಳು ಲಿಂಗಾನುಪಾತದ ಮೇಲೆ, ಮಹಿಳೆಯರ ಸಬಲೀಕರಣದ ನೆಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಕಾರಾತ್ಮಕ ಪರಿಣಾಮ ಬೀರಿದಂತೆ ಕಾಣಿಸುತ್ತಿಲ್ಲ ಎಂಬುದು ಚಿಂತೆಗೆ ಈಡುಮಾಡುವಂತಹ ಸಂಗತಿ.

ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ತಮ್ಮ ಛಾಪು ಮೂಡಿಸಿದ್ದರೂ, ಪೋಷಕರ ಮನಸ್ಸಿನಲ್ಲಿ ಗಂಡುಮಕ್ಕಳಿಗೆ ಈಗಲೂ ಆದ್ಯತೆ ಇರುವುದು ಗುಟ್ಟೇನಲ್ಲ. ಭ್ರೂಣದ ಹಂತದಲ್ಲೇ ಹೆಣ್ಣನ್ನು ಹೊಸಕಿಹಾಕುವ ಕುಕೃತ್ಯಗಳು ನಿಂತಿಲ್ಲ. ಮಹಿಳೆಯರ ಕುರಿತು ಇರುವ ನಮ್ಮ ರೂಢಿಗತ ಪಾಳೆಗಾರಿಕೆ ಮನೋಭಾವ ಬದಲಾಗದ ಹೊರತು ಸಮಾನತೆ ಸಾಧಿಸುವುದು ಸಾಧ್ಯವಿಲ್ಲ. ಸಮಾಜದ ಧೋರಣೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳ ಮುಖಂಡರು ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಇಚ್ಛಾಶಕ್ತಿ ಪ್ರದರ್ಶಿಸಬೇಕು.

■ **ಎನ್‌. ಉದಯಕುಮಾರ್**

**ಕೇಂದ್ರ ಸರ್ಕಾರ 'ಬೇಟಿ ಬಚಾವೊ ಬೇಟಿ ಪಢಾವೊ'ದಂಥ ಜನಪ್ರಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹೆಣ್ಣುಮಕ್ಕಳಿಗಾಗಿ ಹಲವು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರಗಳು ಕೂಡ ಹಮ್ಮಿಕೊಂಡಿವೆ. ಅವೆಲ್ಲ ಲಿಂಗಾನುಪಾತದ ಮೇಲೆ, ಮಹಿಳೆಯರ ಸಬಲೀಕರಣದ ನೆಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಕಾರಾತ್ಮಕ ಪರಿಣಾಮ ಬೀರಿದಂತೆ ಕಾಣಿಸುತ್ತಿಲ್ಲ.**



ಈಶ್ವರ್